# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 626 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 19-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಎಸ್ಕಾಂಗಳು ಕಳೆದ ಜುಲೈ 1 ರಿಂದ ಡಿಸೆಂಬರ್ 2021ರವರೆಗೆ ಪ್ರತಿ ಯೂನಿಟ್‌ನ ವಿದ್ಯುತ್ ದರವನ್ನು 19 ರಿಂದ 31 ಪೈಸೆವರೆಗೆ ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರ ಈ ಹೆಚ್ಚುವರಿ ಸಂಗ್ರಹಕ್ಕೆ ಅನುಮತಿ ನೀಡಿ, ಆದೇಶ ಹೊರಡಿಸಿದೆಯೇ; (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿರುವ ಎಸ್ಕಾಂಗಳಲ್ಲಿ ಪ್ರತಿ ಯುನಿಟ್ ನ ವಿದ್ಯುತ್ ದರವನ್ನು 19 ರಿಂದ 31 ಪೈಸೆವರೆಗೆ ಹೆಚ್ಚಿಸಿರುವುದು ಜುಲೈ 1 ರಿಂದ ಡಿಸೆಂಬರ್ 2021ರವರೆಗಿನ ಅವಧಿಯದ್ದಾಗಿರುವುದಿಲ್ಲ.<br>ಆದಾಗ್ಯೂ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ದಿನಾಂಕ:20.06.2022 ರಲ್ಲಿ 1 ನೇ ಜುಲೈ-2022 ರಿಂದ 31ನೇ ಡಿಸೆಂಬರ್-2022 ರ ಬಿಲ್ಲಿಂಗ್ ಅವಧಿಗೆ ಗ್ರಾಹಕರಿಂದ ವಸೂಲಿ ಮಾಡಬೇಕಾದ ಹಾಗೂ ಹಿಂಪಾವತಿಸಿದ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕದ ಕಂಪನಿವಾರು ವಿವರಗಳು ಕೆಳಕಂಡಂತಿವೆ. |
| ಆ) | ರಾಜ್ಯದಲ್ಲಿನ ಎಸ್ಕಾಂಗಳು ಈ ರೀತಿಯಾಗಿ ಆರು ತಿಂಗಳಲ್ಲಿ ವಿದ್ಯುತ್ ದರವನ್ನು ಎರಡು ಪಟ್ಟು ಏರಿಸಲು ರಾಜ್ಯ ಸರ್ಕಾರ ಕೇಂದ್ರದ ಕೋಲ್ ಇಂಡಿಯಾ ಕಂಪನಿಯ ದುಬಾರಿ ಎನಿಸಿರುವ ವಿದೇಶಿ ಕಲ್ಲಿದ್ದಲನ್ನು ಆಮದು ಮಾಡಿಕೊಂಡು ರಾಜ್ಯಗಳಿಗೆ ಹಂಚಿಕೆ ಮಾಡಿ ಈ ಹೆಚ್ಚುವರಿ ದರವನ್ನು ಇಂಧನ ವೆಚ್ಚ ಹೊಂದಾಣಿಕೆ ಶುಲ್ಕವಾಗಿ ಎಸ್ಕಾಂಗಳು ಸಂಗ್ರಹಿಸಲು ದಾರಿ ಮಾಡಿಕೊಟ್ಟಿರುವುದು ನಿಜವೇ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು) | (see table below)<br>ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಇಂಧನ ವ್ಯತ್ಯಾಸ ದರಗಳನ್ನು (ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳು) ನಿಯಮಾವಳಿ 2013 ಮತ್ತು ನಂತರದ ತಿದ್ದುಪಡಿಗಳ ಪ್ರಕಾರ, ನಿರ್ದಿಷ್ಟಪಡಿಸಿದ ಜನರೇಟರ್ ಗಳಿಂದ ಖರೀದಿಸಿದ ವಿದ್ಯುತ್ ಮೇಲಿನ ಇಂಧನ ವೆಚ್ಚದಲ್ಲಿನ ಬೆಲೆ ವ್ಯತ್ಯಾಸದಿಂದಾಗಿ ಕಾಲಕಾಲಕ್ಕೆ ಜಾರಿಯಲ್ಲಿರುವ ಜಕಾತಿಗೆ ಅನುಸಾರವಾಗಿ, ಪ್ರತಿ ಮೂರು ತಿಂಗಳಿಗೊಮ್ಮೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಅರ್ಜಿಯನ್ನು ಸಲ್ಲಿಸಲಾಗುತ್ತದೆ. ವಿದ್ಯುತ್ ಸರಬರಾಜು ಕಂಪನಿಗಳು |

| ಕಂಪನಿ | ಇಂಧನ ವೆಚ್ಚ ಹೊಂದಾಣಿಕೆ ಶುಲ್ಕ |
|---|---|
| ಬೆಸ್ಕಾಂ | 31 ಪೈಸೆ /ಯೂನಿಟ್ |
| ಸೆಸ್ಕ್ | 19 ಪೈಸೆ /ಯೂನಿಟ್ |
| ಮೆಸ್ಕಾಂ | 21 ಪೈಸೆ /ಯೂನಿಟ್ |
| ಹೆಸ್ಕಾಂ | 27 ಪೈಸೆ /ಯೂನಿಟ್ |
| ಜೆಸ್ಕಾಂ | 26 ಪೈಸೆ /ಯೂನಿಟ್ |

| | | |
|---|---|---|
| | | ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಪರಾಮರ್ಶಿಸಿ Fuel cost Adjustment charges(FAC) (ಇಂಧನ ವೆಚ್ಚ ಹೊಂದಾಣಿಕೆ ಶುಲ್ಕ) ಇದನ್ನು ಪ್ರತಿ ಮೂರು ತಿಂಗಳಿಗೊಮ್ಮೆ ನಿಗದಿ ಪಡಿಸುತ್ತದೆ. ಇದು ಇಂಧನ ವೆಚ್ಚದ ಏರಿಳಿತವನ್ನು ಅವಲಂಬಿಸಿರುತ್ತದೆ. ಇಂಧನ ವೆಚ್ಚವು ಅನುಮೋದನೆ ಮಾಡಿದ ವೆಚ್ಚಕ್ಕಿಂತ ಹೆಚ್ಚಾದಲ್ಲಿ ಸದರಿ ಹೆಚ್ಚುವರಿ ವೆಚ್ಚವನ್ನು ಗ್ರಾಹಕರಿಂದ ವಸೂಲಿ ಮಾಡಲು ಹಾಗೂ ಇಂಧನ ವೆಚ್ಚವು ಅನುಮೋದಿಸಿದ ವೆಚ್ಚಕ್ಕಿಂತ ಕಡಿಮೆಯಾದಲ್ಲಿ ಗ್ರಾಹಕರಿಗೆ ಹಿಂಪಾವತಿಸಲು ಆದೇಶವನ್ನು ಹೊರಡಿಸುತ್ತದೆ. |
| ಇ) | ರಾಜ್ಯದ ಜನತೆ ಇತ್ತೀಚೆಗಷ್ಟೆ ಕೋವಿಡ್ ನಿಂದ ಚೇತರಿಸಿಕೊಳ್ಳುತ್ತಿದ್ದು, ಎಸ್ಕಾಂಗಳು ವಿದ್ಯುತ್ ಸೋರಿಕೆ ತಡೆಯುವುದು ಮತ್ತು ಸರ್ಕಾರಿ ಸ್ಥಳೀಯ ಸಂಸ್ಥೆಗಳಿಂದ ಹಾಗೂ ಬಿಬಿಎಂಪಿ ಮತ್ತು ಬಿಡಬ್ಲ್ಯೂಎಸ್ಎಸ್‌ಬಿ ಮುಂತಾದವುಗಳಿಂದ ಸಾವಿರಾರು ಕೋಟಿಗಳ ಬಾಕಿ ವಸೂಲಿ ಮಾಡಿದ್ದರೆ, ಬಡ ನಾಗರೀಕರ ಮೇಲೆ ಈ ವಿದ್ಯುತ್ ಹೊರೆ ತಪ್ಪಿಸಲು ಸಾಧ್ಯವಾಗುತ್ತಿಲ್ಲವೇ; ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು? (ಪೂರ್ಣ ಮಾಹಿತಿ ನೀಡುವುದು) | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಸೋರಿಕೆ/ ವಿದ್ಯುತ್ ಕಳ್ಳತನವನ್ನು ತಡೆಯಲು ಕಂಪನಿಯ ಜಾಗೃತದಳ / ತಪಾಸಣಾ ಸಿಬ್ಬಂದಿಯು ನಿರಂತರವಾಗಿ ಪರಿವೀಕ್ಷಣೆ/ ತಪಾಸಣೆ ಮಾಡಿ ವಿದ್ಯುತ್ ಕಳ್ಳತನ/ ದುರುಪಯೋಗ ಪ್ರಕರಣಗಳನ್ನು ಪತ್ತೆಹಚ್ಚಿ ಹಿಂಬಿಲ್ಲು/ ದಂಡ ವಿಧಿಸಿ ದಂಡ ವಸೂಲಿ ಮಾಡಿ ಕಂಪನಿಗಳ ಕಂದಾಯ ವೃದ್ಧಿಸಲು ಕ್ರಮ ಕೈಗೊಳ್ಳಲಾಗಿದೆ.<br>ಸರ್ಕಾರದ ವಿವಿಧ ಇಲಾಖೆಗಳಿಂದ ಬರಬೇಕಾದ ಬಾಕಿ ವಸೂಲಾತಿಗೆ ವಿದ್ಯುತ್ ಸರಬರಾಜು ಕಂಪನಿಗಳಿಂದ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.<br>ಕಂಪನಿಗಳು ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ನಿಯಮಾನುಸಾರ ಕಾರ್ಯನಿರ್ವಹಿಸುತ್ತಿದ್ದು, ಕಂಪನಿಯ ಆದಾಯ ಮತ್ತು ಖರ್ಚುಗಳನ್ನು ಪರಿಗಣಿಸಿ ವಿದ್ಯುತ್ ದರವನ್ನು ನಿರ್ಧರಿಸುತ್ತದೆ. ವಿದ್ಯುತ್ ದರವು ವಿದ್ಯುತ್ ಬಾಕಿ ಮೊತ್ತದ ಮೇಲೆ ಅವಲಂಬಿತವಾಗಿರುವುದಿಲ್ಲ.<br>ಸರ್ಕಾರಿ ಇಲಾಖೆಯ ಸ್ಥಾವರಗಳಿಂದ ಬರಬೇಕಾದ ವಿದ್ಯುತ್ ಶುಲ್ಕ ಬಾಕಿಯನ್ನು ಪಾವತಿಸಲು ಕೋರಿ ಎಲ್ಲಾ ಇಲಾಖೆಯ ಮುಖ್ಯಸ್ಥರಿಗೆ ಕಂಪನಿಗಳಿಂದ ಪತ್ರ ವ್ಯವಹರಿಸಲಾಗಿರುತ್ತದೆ ಹಾಗೂ ಸದರಿ ಬಾಕಿಯನ್ನು ಪಾವತಿಸದ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆಯಂತಹ ಕಠಿಣ ಕ್ರಮಗಳನ್ನು ಕೈಗೊಂಡು ಬಾಕಿಯನ್ನು ವಸೂಲಿ ಮಾಡಲಾಗುತ್ತಿದೆ. |

ಸಂಖ್ಯೆ: ಎನರ್ಜಿ 207 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು